# ದೇವಾಂಗ, ನೇಕಾರ, ಮತ್ತು ಕಮ್ಮಾರ ಸಮಾಜದ ಕುಟುಂಬಗಳಿಗೆ ಆಹಾರ ಧಾನ್ಯ ವಿತರಣೆ

**ಚಿತ್ರದುರ್ಗ - ಏ. 21** - ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ಇಂದು ದೇವಾಂಗ ಸಮಾಜ, ನೇಕಾರ ಸಮಾಜ ಹಾಗು ಕಮ್ಮಾರ ಸಮಾಜದ 185 ಕುಟುಂಬಗಳಿಗೆ ಡಾ. ಶಿವಮೂರ್ತಿ ಮುರುಘಾ ಶರಣರು ಆಹಾರ ಧಾನ್ಯವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ವೀರಶೈವ ಸಮಾಜದ ಅಧ್ಯಕ್ಷ ಟಿ.ಎಸ್.ಎನ್.ಜಯಣ್ಣ, ಡಾ. ರಮೇಶ್, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ದೇವಾಂಗ ಸಮಾಜದ ಚಂದ್ರಶೇಖರ್, ನೇಕಾರ ಸಮಾಜದ ಲಿಂಗರಾಜು ಮತ್ತು ಕಮ್ಮಾರ ಸಮಾಜದ ಹನುಮಂತಪ್ಪ ಮೊದಲಾದ ಮುಖಂಡರು ಉಪಸ್ಥಿತರಿದ್ದರು.







